# ಭಾರತ-ಚೀನಾ ಗಡಿ ವಿಚಾರದಲ್ಲಿ ಸಮಾಲೋಚನೆ ಮತ್ತು ಸಮನ್ವಯದ ಕಾರ್ಯವಿಧಾನದ 30ನೇ ಸಭೆ

ಜುಲೈ 31, 2024

ಭಾರತ-ಚೀನಾ ಗಡಿ ವ್ಯವಹಾರಗಳ ಸಮಾಲೋಚನೆ ಮತ್ತು ಸಮನ್ವಯಕ್ಕಾಗಿನ ಕಾರ್ಯವಿಧಾನದ (ಡಬ್ಲ್ಯುಎಂಸಿಸಿ) 30ನೇ ಸಭೆ ನವದೆಹಲಿಯಲ್ಲಿ 2024ರ ಜುಲೈ 31ರಂದು ನಡೆಯಿತು. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ(ಪೂರ್ವ ಏಷ್ಯಾ) ಶ್ರೀ ಗೌರಂಗಲಾಲ್ ದಾಸ್ ಅವರು ಭಾರತದ ನಿಯೋಗದ ನೇತೃತ್ವ ವಹಿಸಿದ್ದರು. ಚೀನಾ ನಿಯೋಗದ ನೇತೃತ್ವವನ್ನು ಚೀನಾ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಗಡಿ ಮತ್ತು ಸಾಗರ ಇಲಾಖೆಯ ಪ್ರಧಾನ ನಿರ್ದೇಶಕರಾದ ಶ್ರೀ ಹಾಂಗ್ ಲಿಯಾಂಗ್ ವಹಿಸಿದ್ದರು.

2. ಅಸ್ತಾನಾ ಮತ್ತು ವಿಯೆಂಟಿಯಾನೆಯಲ್ಲಿ ಇತ್ತೀಚೆಗೆ ಉಭಯ ವಿದೇಶಾಂಗ ಸಚಿವರು ನಡೆಸಿದ ಮಾತುಕತೆಯ ಮುಂದಿನ ಭಾಗವಾಗಿ, ಎರಡೂ ಕಡೆಯವರು ಇತ್ಯರ್ಥಕ್ಕೆ ಬಾಕಿಯಿರುವಂಥ ಸಮಸ್ಯೆಗಳಿಗೆ ಆದಷ್ಟು ಬೇಗ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ವಾಸ್ತವಿಕ ಗಡಿ ನಿಯಂತ್ರಣ ರೇಖೆ(ಎಲ್ಎಸಿ)ಯಲ್ಲಿನ ಪ್ರಸ್ತುತ ಪರಿಸ್ಥಿತಿಗಳನ್ನು ಪರಿಶೀಲಿಸಿದರು. ದ್ವಿಪಕ್ಷೀಯ ಸಂಬಂಧವು ಸಹಜ ಸ್ಥಿತಿಗೆ ಮರಳಬೇಕೆಂದರೆ, ಶಾಂತಿ ಮತ್ತು ನೆಮ್ಮದಿಯ ಪುನಸ್ಥಾಪನೆ ಹಾಗೂ ಎಲ್ಎಸಿ ಬಗೆಗೆ ಗೌರವವು ಅತಿ ಮುಖ್ಯವಾಗುತ್ತದೆ. ಉಭಯ ದೇಶಗಳ ಸರ್ಕಾರಗಳ ನಡುವೆ ನಡೆಯಲಾದ ದ್ವಿಪಕ್ಷೀಯ ಒಪ್ಪಂದಗಳು, ಶಿಷ್ಟಾಚಾರಗಳು ಮತ್ತು ತಿಳಿವಳಿಕೆಗಳಿಗೆ ಅನುಗುಣವಾಗಿ ಗಡಿ ಪ್ರದೇಶದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಜಂಟಿಯಾಗಿ ಎತ್ತಿಹಿಡಿಯುವ ಅಗತ್ಯತೆಯನ್ನು ಅವರೂ ಒಪ್ಪಿಕೊಂಡರು.

3. ಸಭೆಯಲ್ಲಿ ನಡೆದ ಚರ್ಚೆಯು ಆಳವಾಗಿಯೂ, ರಚನಾತ್ಮಕವಾಗಿಯೂ ಮತ್ತು ಮುಂದಾಲೋಚನೆಯಿಂದ ಕೂಡಿತ್ತು. ಸ್ಥಾಪಿತ ರಾಜತಾಂತ್ರಿಕ ಮತ್ತು ಸೇನಾ ಮಾಧ್ಯಮಗಳ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಲು ಎರಡೂ ಕಡೆಯವರು ಒಪ್ಪಿಗೆ ಸೂಚಿಸಿದರು.

4. ಚೀನಾ ನಿಯೋಗದ ನಾಯಕರು ಭಾರತದ ವಿದೇಶಾಂಗ ಕಾರ್ಯದರ್ಶಿಯವರನ್ನು ಭೇಟಿಯಾದರು.

**ನವದೆಹಲಿ**

**ಜುಲೈ 31, 2024**